ಅಡಿಕೆ ಮತ್ತು ತೆಂಗು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಕಂಡಂತೆ ಇರುತ್ತವೆ.

1. ತೆಂಗಿನ ಪ್ರದೇಶ ವಿಸ್ತರಣೆಗೆ ರೈತರಿಗೆ ಸಹಾಯಧನ ಒದಗಿಸಲಾಗುತ್ತಿದೆ.
2. ಉತ್ತಮ ತೆಂಗಿನ ಸಸಿಗಳನ್ನು ಉತ್ಪಾದಿಸಿ ಯೋಗ್ಯಬೆಲೆಯಲ್ಲಿ ರೈತರಿಗೆ ಒದಗಿಸಲಾಗುತ್ತಿದೆ.
3. ಮಾರುಕಟ್ಟೆಯಲ್ಲಿ ತೆಂಗಿನ ಮತ್ತು ಅಡಿಕೆಯು ಬೆಲೆ ಕುಸಿದಾಗ ರಾಜ್ಯಸರ್ಕಾರವು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಬೆಂಬಲಬೆಲೆ ಯೋಜನೆ ಜಾರಿಗೊಳಿಸುತ್ತಿದೆ.
4. ಈ ಬೆಳೆಗಳ ಆಧುನಿಕ ಬೇಸಾಯ ಕ್ರಮಗಳ ಬಗ್ಗೆ ರೈತರಿಗೆ ತಾಂತ್ರಿಕ ಮಾಹಿತಿ ನೀಡಲಾಗುತ್ತಿದೆ.
5. ರೈತರಿಗೆ ಜಿಲ್ಲಾ ಪಂಚಾಯತ್‌ಗಳ ಮೂಲಕ ಶೇ. 50ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ವಿತರಿಸಲಾಗುತ್ತಿದೆ.
6. ತೆಂಗಿನ ಮರಗಳ ಉತ್ಪಾದಕತೆ ಹೆಚ್ಚಿಸಲು ಬೇಕಾಗುವ ಪೋಷಕಾಂಶಗಳನ್ನು ಆಯ್ದ ಫಲಾನುಭವಿಗಳಿಗೆ ನೀಡಲಾಗುತ್ತಿದೆ.
7. ತೆಂಗಿನ ಮತ್ತು ಅಡಿಕೆ ತೋಟಗಳಿಂದ ಆದಾಯವನ್ನು ಹೆಚ್ಚಿಸಲು ವೆನಿಲ್ಲಾ ಕಾಳುಮೆಣಸು, ಕೋಕೋ ಇತ್ಯಾದಿ ಬೆಳೆಗಳನ್ನು ಅಂತರ ಬೆಳೆಗಾಗಿ ಬೆಳೆಯಲು ರೈತರಿಗೆ ಪ್ರೋತ್ಸಾಹಿಸಲಾಗಿರುತ್ತಿದೆ.
8. ಈ ಬೆಳೆಗಳನ್ನು ಬೆಳೆಸಲು ಸಾಲ ಸೌಲಭ್ಯವನ್ನು ಒದಗಿಸಲು ನೆರವು ನೀಡಲಾಗುತ್ತಿದೆ.
9. ತೋಟಗಳ ತ್ಯಾಜ್ಯ ವಸ್ತುಗಳಿಂದ ಸಾವಯವ ಗೊಬ್ಬರ ಹಾಗೂ ಎರೆಹುಳು ಗೊಬ್ಬರಗಳನ್ನಾಗಿ ಪರಿವರ್ತಿಸಲು ಪ್ರೋತ್ಸಾಹಿಸಲಾಗುತ್ತಿದೆ.
10. ತೆಂಗಿನ ಉತ್ಪನ್ನಗಳ ಸಮರ್ಥ ಬಳಕೆಗಾಗಿ ಪ್ರಾತ್ಯಕ್ಷಿತೆ ಮತ್ತು ತರಬೇತಿ ಕೇಂದ್ರವನ್ನು ಸ್ಥಾಪಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.
11. ತೆಂಗಿನ ಕಪ್ಪುತಲೆ ಹುಳುವಿನ ನಿಯಂತ್ರಣೆಗಾಗಿ ವಿವಿಧ ಪರೋಪ ಜೀವಿಗಳನ್ನು ಇಲಾಖೆಯ ಪ್ರಯೋಗ ಶಾಲೆಗಳಲ್ಲಿ ಉತ್ಪಾದಿಸಿ ರೈತರ ತೋಟಗಳಿಗೆ ಉಚಿತವಾಗಿ ವಿತರಿಸಲಾಗುತ್ತಿದೆ.
12. ತೆಂಗಿನ ನುಸಿ ನಿರ್ವಹಣೆಗಾಗಿ ತೆಂಗಿನ ಮರಗಳ ಆರೋಗ್ಯ ಮಟ್ಟವನ್ನು ಅಭಿವೃದ್ಧಿಪಡಿಸಲು ಬ್ಲಾಕ್ ಪ್ರಾತ್ಯಕ್ಷತೆ ಕೈಗೊಳ್ಳುವ ಮೂಲಕ ಪೋಷಕಾಂಶಗಳ ಸೌಲಭ್ಯಗಳನ್ನು ಆಯ್ದ ರೈತರಿಗೆ ಒದಗಿಸಲಾಗುತ್ತಿದೆ.
13. ತೆಂಗಿನ ನೀರಾ ಸಂಸ್ಕರಣೆ ಮತ್ತು ಬಳಕೆ ಕುರಿತಂತೆ ಸಂಶೋಧನೆ ಕೈಗೊಳ್ಳಲು CFTRI/ DFRL ಹಣಕಾಸಿನ ನೆರವು ಒದಗಿಸಲಾಗಿದೆ.

ಆ) ಅಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ನುಸಿ ಪೀಡೆ ನಿಯಂತ್ರಣಕ್ಕೆ ನೀಡಿದ ಔಷಧಿ ವಿತರಣೆಯಲ್ಲಿ ಆಗಿರುವ ಅಕ್ರಮಗಳ ಬಗ್ಗೆ

2393 (2859) : ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನುಸಿ ಪೀಡೆ ನಿಯಂತ್ರಣಕ್ಕೆ ರಾಜ್ಯ ಸರ್ಕಾರದ ವೆಚ್ಚ ಮಾಡಿದ ಒಟ್ಟು ಹಣ ಎಷ್ಟು: (ವಿವರವನ್ನು ಜಿಲ್ಲಾವಾರ ನೀಡುವುದು);

ಆ) ನುಸಿ ಪೀಡೆ ನಿಯಂತ್ರಣಕ್ಕೆ ಸರ್ಕಾರ ನೀಡಿದ ಔಷಧಿ ವಿತರಣೆಯಲ್ಲಿ ಅಕ್ರಮಗಳು ನಡೆದಿರುವುದು ನಿಜವೇ; ನಡೆದಿದ್ದಲ್ಲಿ ಅಕ್ರಮಗಳ ವಿವರ ನೀಡವುದು;

ಇ) ಈ ಅಕ್ರಮಗಳಿಗೆ ಸಂಬಂಧಪಟ್ಟಂತೆ ಸರ್ಕಾರ ಯಾರನ್ನು ತಪ್ಪಿತಸ್ಥರೆಂದು ಗುರುತಿಸಿದೆ;

ಈ) ತಪ್ಪಿತಸ್ಥರ ಮೇಲೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ರೂ. 1412.61 ಲಕ್ಷಗಳು ಜಿಲ್ಲಾವಾರು ವಿವರವನ್ನು ಅನುಬಂಧ–1ರಲ್ಲಿ ಒದಗಿಸಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಅನುಬಂಧ – 1

ತೆಂಗಿನ ನುಸಿ ನಿಯಂತ್ರಣೆಗಾಗಿ ಜಿಲ್ಲಾವಾರು ಖರ್ಚು ಮಾಡಿದ ವೆಚ್ಚ (1999–00 ರಿಂದ 2002–03ವರೆಗೆ)

ಕ್ರ. ಸಂ.	ಜಿಲ್ಲೆಯ ಹೆಸರು	ಒಟ್ಟು ವೆಚ್ಚ (ರೂ. ಲಕ್ಷಗಳಲ್ಲಿ)
1	2	3
1.	ಬೆಂಗಳೂರು(ನಗರ)	78.62
2.	ಬೆಂಗಳೂರು (ಗ್ರಾ)	120.42
3.	ತುಮಕುರು	253.43
4.	ಕೋಲಾರ	151.74
5.	ಚಿತ್ರದುರ್ಗ	174.52
6.	ಶಿವಮೊಗ್ಗ	23.76
7.	ದಾವಣಗೆರೆ	19.67
8.	ಮೈಸೂರು	75.49
9.	ಮಂಡ್ಯ	179.94
10.	ಹಾಸನ	145.27
11.	ಚಾಮರಾಜನಗರ	36.04
12.	ದಕ್ಷಿಣ ಕನ್ನಡ	2.61
13.	ಚಿಕ್ಕಮಗಳೂರು	93.32
14.	ಉಡುಪಿ	2.60
15.	ಬೆಳಗಾವಿ	0.08
16.	ಧಾರವಾಡ	2.45

17.	ಉತ್ತರ ಕನ್ನಡ	1.26
18.	ಗದಗ	0.18
19.	ಹಾವೇರಿ	0.28
20.	ರಾಯಚೂರು	0.00
21.	ಕೊಪ್ಪಳ	0.18
22.	ಬಳ್ಳಾರಿ	0.28
23.	ತೋ.ಉ.ನಿ. (ಸಸಂ). ಲಾಲ್‌ಬಾಗ್	50.47
	ಒಟ್ಟು	**1412.61**

ರಾಜ್ಯದಲ್ಲಿ ಪುಷ್ಪ ಕೃಷಿ ಅಭಿವೃದ್ಧಿಗೊಳಿಸುವ ಬಗ್ಗೆ

2394 (2860) : ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೋಟಗಾರಿಕೆ ಉತ್ಪನ್ನಗಳನ್ನು ಬೆಳೆಯುವ ಪ್ರದೇಶಗಳಿಗೆ ಆರ್ಥಿಕ ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ಸರ್ಕಾರ ಹಾಕಿಕೊಂಡ ಯೋಜನೆಗಳೇನು;

ಆ) ಪುಷ್ಪಕೃಷಿ ಅಭಿವೃದ್ಧಿಗೊಳಿಸಲು ಹಾಗೂ ತೋಟಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಆಗಿರುವ ರಫ್ತು ಎಷ್ಟು; ಯಾವ ಯಾವ ದೇಶಗಳಿಗೆ ಆಗಿವೆ?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ರಾಜ್ಯದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿಗಾಗಿ ಕೆಳಕಾಣಿಸಿದ ಪ್ರಮುಖ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

ತೋಟಗಾರಿಕೆ ಬೆಳೆಗಳಿಗಾಗಿ ಉತ್ಕೃಷ್ಟ ಗುಣಮಟ್ಟದ ನಾಟಿ ಮಾಡವ ವಸ್ತುಗಳ ಉತ್ಪಾದನೆ ಮತ್ತು ವಿತರಣೆ, ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ, ತೋಟದ ಬೆಳೆಗಳ ಕೀಟರೋಗಗಳ ಸಮಗ್ರ ನಿಯಂತ್ರಣ, ರೈತರಿಗೆ ತರಬೇತಿ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ, ಉಷ್ಣ ಮತ್ತು ಶುಷ್ಕವಲಯದ ಹಣ್ಣುಗಳ ಸಮಗ್ರ ಅಭಿವೃದ್ಧಿ, ತರಕಾರಿ ಬೆಳೆಗಳ ಸಮಗ್ರ ಅಭಿವೃದ್ಧಿ, ಸಮಗ್ರ ಕೋಕೋ ಅಭಿವೃದ್ಧಿ, ಸಮಗ್ರ ಗೇರು ಅಭಿವೃದ್ಧಿ, ಔಷಧೀಯ ಹಾಗೂ ಸುಗಂಧಿತ ಬೆಳೆಗಳ ಸಮಗ್ರ ಅಭಿವೃದ್ಧಿ, ಕೃಷಿಯಲ್ಲಿ ಪ್ಲಾಸ್ಟಿಕ್ ಬಳಕೆ, ವಾಣಿಜ್ಯ ಪುಷ್ಪಗಳ ಸಮಗ್ರ ಅಭಿವೃದ್ಧಿ, ಸಾಂಬಾರು ಬೆಳೆಗಳ ಸಮಗ್ರ ಅಭಿವೃದ್ಧಿ ತಾಳೆಬೆಳೆ ಅಭಿವೃದ್ಧಿ ಯೋಜನೆ, ಸಮಗ್ರ ತೆಂಗು ಬೇಸಾಯ ಇತರೆ.

ಆ) ಪುಷ್ಪಿಕೃಷಿ ಅಭಿವೃದ್ಧಿಗೊಳಿಸಲು ಕೆಳಕಾಣಿಸಿದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಗುಣಮಟ್ಟದ ಬೀಜ, ಗೆಡ್ಡೆ ಹಾಗೂ ಸಸಿಗಳನ್ನು ಫಲಾನುಭವಿಗಳಿಗೆ ನೀಡಲಾಗುತ್ತದೆ.

2. ರೈತರಿಗೆ ವಾಣಿಜ್ಯ ಪುಷಾಭಿವೃದ್ಧಿಯ ಬಗ್ಗೆ ಮಾಹಿತಿ ನೀಡಲು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರೈತರಿಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.